ದಳದಲ್ಲಿ ಪಡೆದ ತರಬೇತಿಯು ಪ್ರಯೋಜನವಾಗುವಂತಹ ಗ್ರೂಪ್ 'ಸಿ' ಮತ್ತು 'ಡಿ' ಹುದ್ದೆಗಳ ನೇಮಕಾತಿಯಲ್ಲಿ ಗೃಹ ರಕ್ಷಕರಿಗೆ ಅದ್ಯತೆ ನೀಡುವ ಬಗ್ಗೆ ಸರ್ಕಾರವು ಅವಕಾಶವನ್ನು ಕಲ್ಪಿಸಿದೆ.

ಇ) ಇಲ್ಲಾ.

Development of Nagarabhavi second stage layout by the BDA

2124 - M.Narayana swamy, (Bethamangala) - will the chief minister be pleased to state

a) The number of sites allotted in Nagarphavi second stage by the BDA.

b) Whether it has come to the notice of the Government that the allottees are not able to construct houses due to lack of water supply, under-ground drainage and electricity and other facilities.

c) When will the BDA take action to provide water supply, underground, ekectricity and other facilities,

d) Inview of the above, will the BDA allow sufficient time to the allottees to construct their houses?

Shri. S. BANGARAPPA (Chief Minister) :

a) 3,674

b) Yes

c) B.W.S. & S.B., and K.E.B., will be requested to provide water supply and sanitary and Electric facilities expeditiously and this will be completed as early as possible.

d) yes.

ಕೋಲಾರ ಜಿಲ್ಲೆಯಲ್ಲಿರುವ ಪೋಲೀಸ್ ಠಾಣೆಗಳ ಸಂಖ್ಯೆ ಹಾಗೂ ಕಾರ್ಯ

2122 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿ ಇರುವ ಪೋಲೀಸ್ ಠಾಣೆಗಳೆಷ್ಟು?

ಆ) ಅವು ಅಲ್ಲಿನ ಜನ ಸಂಖ್ಯೆಗನುಗುಣವಾಗಿವೆಯೇ?

ಇ) ಕೋಲಾರ ಜಿಲ್ಲೆಯಲ್ಲಿ 1991-92ರಲ್ಲಿ ತೆರೆಯಲಿರುವ ಹೊಸ ಪೋಲೀಸ್ ಠಾಣೆಗಳೆಷ್ಟು?

ಈ) ಈ ಜಿಲ್ಲೆಯಲ್ಲಿ ಕಳ್ಳತನ ಹಾಗೂ ದರೋಡೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರವು ಕೋಲಾರ ಜಿಲ್ಲೆಯಲ್ಲಿ ಹೆಚ್ಚು ಪೋಲೀಸ್ ಠಾಣೆಗಳನ್ನು ತೆರೆಯುವಲ್ಲಿ ಕ್ರಮ ತೆಗೆದುಕೊಳ್ಳುವುದೆ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :

ಅ) 24

ಆ) ಹೌದು.

ಇ) ಒಂದು

ಈ) ಅಧ್ಯತೆ ಅಗತ್ಯತೆಯನ್ನು ಅನುಸರಿಸಿ ಹೊಸ ಪೋಲೀಸ್ ಠಾಣೆಗಳನ್ನು ತೆರೆಯಲಾಗುವುದು.

ಜೆ.ಪಿ.ನಗರ 2ನೇ ಹಂತದ ನಿವೇಶನಗಳ ಬಗ್ಗೆ

2125 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) :ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಜೆ.ಪಿ. ನಗರ 2ನೇ ಹಂತದಲ್ಲಿ ಕಳೆದ ಹತ್ತು ವರ್ಷಗಳಿಂದ ಹಿಂದೆ ನಿವೇಶನಗಳನ್ನು ನೀಡಿದ್ದು ಮನೆಗಳನ್ನು ಕಟ್ಟಿಲ್ಲದಿರುವುದು.

ಆ) ಮನೆಗಳನ್ನು ನಿರ್ಮಾಣ ಮಾಡದೇ ಇರುವುದರಿಂದ, ಈಗಾಗಲೇ ಮನೆಗಳನ್ನು ಕಟ್ಟಿದ್ದು ವಾಸವಾಗಿರುವವರಿಗೆ ತೊಂದರೆಯಾಗುತ್ತಿಲ್ಲವೇ?

ಇ) ಸರ್ಕಾರ ಅಂತಹ ನಿವೇಶನಗಳನ್ನು ರದ್ದುಪಡಿಸಿ, ಇತರರಿಗೆ ಪುನರ್ ಹಂಚಿಕೆ ಮಾಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಬಹುತೇಕ ನಿವೇಶನದಾರರು ಮನೆಗಳನ್ನು ಈಗ ನಿರ್ಮಿಸಿರುತ್ತಾರೆ. ಕೆಲವು ನಿವೇಶನಗಳು ಮಾತ್ರ ಖಾಲಿ ಇರುತ್ತವೆ.

ಆ) ಇದುವರೆಗೆ ಇಂತಹ ತೊಂದರೆಗಳು ಪ್ರಾಧಿಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕಿನಲ್ಲಿ ಆಗಿರುವ ದರೋಡೆ

2101 - ಶ್ರೀ ಬಿ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕಿನಲ್ಲಿ ಕಳೆದ ೬ ತಿಂಗಳಿಂದ (1-2-91 ರಿಂದ 31-7-91) ರವರೆಗೆ ಆಗಿರುವ ಲೂಟಿ ಮತ್ತು ದರೋಡೆಗಳು?

ಆ) ಈ ದರೋಡೆ ಮತ್ತು ಲೂಟಿಗಳಿಂದಾದ ಆಸ್ತಿ ಪಾಸ್ತಿಗಳಿಗಾದ ಹಾನಿ ಮೊತ್ತ ಎಷ್ಟು?

ಇ) ಸರ್ಕಾರವು ಈ ಆಸ್ತಿ-ಪಾಸ್ತಿ ನಷ್ಟಗಳಿಗೆ ಏನಾದರು ಪರಿಹಾರ ನೀಡಿದೆಯೇ?

ಈ) ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕಿನಲ್ಲಿ ದರೋಡೆ ಮತ್ತು ಲೂಟಿಗಳನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಮಂತ್ರಿಗಳು)

ಅ) ದರೋಡೆ

ವೃತ್ತಿಪರ	2	
ವೃತ್ತಿಯೇತರ	3	5
ಲೂಟಿ	4	

ಆ) ದರೋಡೆಗಳಿಂದ ರೂ. 1,13,500-00

ಲೂಟಿಯಿಂದ ರೂ.15,030-00

ಇ) ಇಲ್ಲಾ

ಈ) ಪೋಲೀಸ್ ಸಂಚಾರಿ ದಳ ಮತ್ತು ಸುಧಾರಿತ ಸಂಪರ್ಕ ಸಾಧನಗಳನ್ನು ಒದಗಿಸಲಾಗಿದೆ. ಒಂಟಿವಾರಿ ಕಟ್ಟಡಗಳಿರುವ ಪ್ರದೇಶದಲ್ಲಿ ಪೋಲೀಸ್ ಸಿಬ್ಬಂದಿಯವರು